ಇರ್ಲಿ ಸೀದಾ ನಮ್ಮ ಖಾನಾವಳಿಗೆ ಬರ್‍ತಿದ್ರು... ನೀ ನಂಬ್ತೆ ಇಲ್ಲ ಗೊತ್ತಿಲ್ಲ... ಒಂದು ಸಲ ರಾಜಕುಮಾರ ಸಿನಿಮಾ ಶೂಟಿಂಗ್ ಅಂತ ಈ ಕಡೆ ಬಂದಾಗ ನಮ್ಮ ಖಾನಾವಳಿಗೆ ಬಂದು ಊಟ ಮಾಡಿ ಹೋಗಿದ್ರು... ನಮ್ಮ ಖಾನಾವಳ್ಯಾಗ ಆದಲ ರಾಜಕುಮಾರ ಜೊತೆ ನಾ ನಿಂತ ಆ ಫೋಟೊ ಅದು ಆವಾಗಿನದೆ ನೋಡು... ಬಿಸಿಬಿಸಿ ಜ್ವಾಳದ ರೊಟ್ಟಿ, ಸಜ್ಜಿ ರೊಟ್ಟಿ, ಶೇಂಗಾ ಹೋಳಿಗೆ, ತುಪ್ಪ, ಹಿಂಡಿ, ಹಸಿ ಮೆಣಸಿನಕಾಯಿ ಚೆಟ್ನಿ, ಹಾಲು, ಮೊಸರು, ಸಪ್ಪನ ಬ್ಯಾಳಿ, ಮುಟಗಿ ಊಟ ಎಲ್ಲಾ ಸಿಗತ್ತಿತ್ತು. ಒಂದು ಸಲ ತಿಂದು ಹೋದ್ರು ಅಂದ್ರ ನೆನಸ್ಕೊಂಡು ಮತ್ತ ಮತ್ತ ಬರ್ತಿದ್ರು... ಆದ್ರ ಏನು ಮಾಡೋದು ನಮ್ಮ ಹಣೆಬರಹಾನೇ ಚೊಲೊ ಇಲ್ಲ' ಎಂದು ಇನ್ನೂ ಏನೋ ಹೇಳಬೇಕೆಂದವನು ಒಮ್ಮೆಲೇ ಮೌನವಾದ.

ವಿಪರ್ಯಾಸವೆಂದರೆ ಕೃಷ್ಣಾ ನದಿಯ ಹಿನ್ನೀರು ಬಂದು ಮುಳುಗಡೆಯ ಹೊಡೆತಕ್ಕೆ ಸಿಕ್ಕು ಜನ ಯಾವಾಗ ಬಾಗಲಕೋಟೆಯಿಂದ ನವನಗರಕ್ಕೆ ಶಿಫ್ಟ್ ಆದರೋ ಆಗಿನಿಂದ ಆರಕ್ಕೇರದೆ ಮೂರಕ್ಕೆ ಇಳಿಯದೇ ಧರೆಪ್ಪನ ಖಾನಾವಳಿ ಕುಂಟುತ್ತ ಸಾಗಿತ್ತು. ಹೊಲ ಮನೆ ಕಳೆದುಕೊಂಡ ಜನ ಸಂತ್ರಸ್ತರಾಗಿ ಸರ್ಕಾರದಿಂದ ಲಭಿಸಿದ ಅಲ್ಪ ಸ್ವಲ್ಪ ಪರಿಹಾರದ ರೊಕ್ಕ ಕೈ ಸೇರಿದ ಬಳಿಕ ಹೊಟೇಲ್, ಕಿರಾಣಿ ಅಂಗಡಿ, ರೆಸ್ಟೋರೆಂಟ್ ಹೀಗೆ ಹತ್ತಾರು ಉದ್ಯೋಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಕುಲಕಸುಬು ಎಂಬಂತೆ ತಾತ ಮುತ್ತಾತನ ಕಾಲದಿಂದಲೂ ಉದ್ಯೋಗಗಳನ್ನು ಮಾಡಿಕೊಂಡು ಬರುತ್ತಿದ್ದ ಧರೆಪ್ಪನಂತವರಿಗೆ ದೊಡ್ಡ ಹೊಡೆತ ಬಿತ್ತು. ಆದರೆ ಧರೆಪ್ಪನಿಗೆ ಅದಕ್ಕಿಂತಲೂ ಹೆಚ್ಚಿಗೆ ಚಿಂತೆಗೆ ದೂಡಿದ್ದು ಅವನ ಎಲ್ಲ ಕೆಲಸಗಳಿಗೂ ಬೆನ್ನೆಲುಬಾಗಿದ್ದ ಅವನ ಹೆಂಡತಿ ಶಿವಮ್ಮ ಕಾಲು ಜಾರಿ ಬಿದ್ದದ್ದೇ ನೆಪವಾಗಿ ಹಾಸಿಗೆ ಹಿಡಿದಿರುವುದು ಅವನಿಗೆ ತನ್ನ ಬಲಗೈ ಕಳೆದುಕೊಂಡಂತಾಗಿತ್ತು. ಸಾಲದ್ದಕ್ಕೆ ಮದುವೆ ವಯಸ್ಸಿಗೆ ಬಂದಿರುವ ಅವನ ಮಗ ಮಣಿಕಂಠನ ಇತ್ತೀಚಿನ ನಡವಳಿಕೆ ಅವನನ್ನು ಪೂರಾ ಕಂಗೆಡಿಸಿತ್ತು. ಒಂದಷ್ಟು ದಿನ ಖಾನಾವಳಿಯಲ್ಲಿ ಕೆಲಸ ಮಾಡಿ ಕೊನೆಗೆ 'ನನಗ್ ಈ ಖಾನಾವಳ್ಯಾಗ ನೊಣ ಹೊಡ್ಕೊತು ಕೂರೋದು ಆಗಂಗಿಲ್ಲ' ಎಂದು ಕಡ್ಡಿ ಮುರಿದಂತೆ ಹೇಳಿ ಮಣಿಕಂಠ ಡಿಸಿ ಆಫೀಸಿನಲ್ಲಿ ಪೀವೂನ್ ಆಗಿ ಕೆಲಸಕ್ಕೆ ಸೇರಿದ. ಇದರ ನಡುವೆ ಕುಡಿಯುವುದು ಯಾವಾಗ ಕಲಿತನೋ ಗೊತ್ತಿಲ್ಲ. ಕಂಠಪೂರ್ತಿ ಕುಡಿದು ನಡು ರಸ್ತೆಯಲ್ಲಿ ಮಲಗುವುದು, ಸುಖಾ ಸುಮ್ಮನೆ ಜಗಳ ಕಾಯುವುದು, ಖಾನಾವಳಿಗೆ ಬಂದು ಗದ್ದಲ ಎಬ್ಬಿಸುವುದು ಮಾಡುತ್ತಿದ್ದ. ಧರೆಪ್ಪ ನಿರ್ವಾಹವಿಲ್ಲದೆ ಎಲ್ಲ ಜವಾಬ್ದಾರಿಗಳನ್ನು ತಾನೇ ಹೊರಬೇಕಾಯಿತು.

* * *

ಧರೆಪ್ಪನ ಮಾತುಗಳಿಗೆಲ್ಲ ಹ್ಞೂಂಗುಡುತ್ತಿದ್ದ ಗುರಪ್ಪ ಎದ್ದು ನಿಂತು ಕಣ್ಸನ್ನೆಯಲ್ಲಿಯೇ ಎಸ್.ಐ ಬಂದರೆಂದು ತಿಳಿಸಿದ. ಮಾದೇವನನ್ನು ಸೆಲ್‌ನಿಂದ ಹೊರಗೆ ಕರೆದರು. ಸದಾ ಹಸನ್ಮುಖಿಯಾಗಿರುತ್ತಿದ್ದ ಮಾದೇವ ಮುಖ ಸಪ್ಪಗೆ ಮಾಡಿಕೊಂಡು ನಿಂತಿರುವುದನ್ನು ಕಂಡು ಧರೆಪ್ಪನ ಮನಸ್ಸಿಗೆ ಪಿಚ್ಚೆನ್ನಿಸಿತು. ಮಾದ್ಯಾ ಸ್ಟೇಷನ್‌ಗೆ ಬರುವಂತಹ ತಪ್ಪು ಏನು ಮಾಡಿರಬಹುದು? ಈಗ ಎಸ್.ಐ ಎದುರು ಏನಂತ ಹೇಳಲಿ? ಅಷ್ಟಕ್ಕೂ ಅವರು ನನ್ನ ಮಾತು ಕೇಳುತ್ತಾರಾ? ಧರೆಪ್ಪ ಮನಸ್ಸಿನಲ್ಲಿಯೇ ಲೆಕ್ಕ ಹಾಕುತ್ತಿದ್ದ. ಎಸ್.ಐ ಬಂದು ತಮ್ಮ ಕುರ್ಚಿಯ ಮೇಲೆ ಕೂತರು. ಧರೆಪ್ಪ ಅವರನ್ನು ನಮಸ್ಕರಿಸುತ್ತ ಎರಡು ಹೆಜ್ಜೆ ಮುಂದೆ ಹೋಗಿ 'ಸಾಹೇಬ್ರ ಮಾದೇವ ನಮ್ಮ ಹುಡುಗ ಅದಾನ್ರಿ... ನಮ್ಮ ಖಾನಾವಳಿಗಿ ದಿನಾ ನೀರ ತಂದು ಹಾಕ್ತಾನ್ರಿ... ಭಾಳ ಚೊಲೊ ಅದಾನ್ರಿ' ಎಂದ. ಅದಕ್ಕೆ ಎಸ್.ಐ ದುರುಗುಟ್ಟಿ ನೋಡುತ್ತಾ, ಗಟ್ಟಿ ಧ್ವನಿಯಲ್ಲಿ 'ನಮ್ಮ ಹುಡುಗ ಅಂತೀರಿ... ನಡು ರಾತ್ರಿ ರೋಡ್ ಮ್ಯಾಲ ಯಾಕ ಬಿಡ್ತಿರಿ? ಅಷ್ಟು ಬೇಕಾಗಿತಂದ್ರ ಒಯ್ದು ನಿಮ್ಮ ಮನ್ಯಾಗ ಇಟ್ಗೊರಿ... ಗೊತ್ತಾದಲ ಇದೇ ತಿಂಗಳದಾಗ ನಾಲ್ಕು ಅಂಗಡಿ ಕಳತಾನ ಆಗ್ಯಾವ?' ಎಂದರು. ಅಂತೂ ಮಾದೇವ ಯಾವ ಘನ ಅಪರಾಧವೇನೂ ಮಾಡಿಲ್ಲ ಎಂಬುದನ್ನು ಖಾತ್ರಿ ಮಾಡಿಕೊಂಡ ಧರೆಪ್ಪ 'ನಿಮ್ಮ ಮಾತು ಖರೆ ಆದ್ರಿ ಸಾಹೇಬ್ರ... ಕಳ್ಳರ ಹಾವಳಿ ಹೆಚ್ಚಾಗೇದ... ಇದೊಂದು ಸಲ ಬಿಡ್ರಿ... ಅಂವ ನನ್ನ ತಾಬಿ' ಎಂದು ಗೋಗರೆದ. 'ಆಯ್ತು ನಿಮ್ಮ ಮಾತು ಕೇಳಿ ಬಿಡ್ತಿನಿ... ಇನ್ನೊಂದು ಸಲ ರಾತ್ರಿ ಎಲ್ಲರೆ ಕಂಡ್ರ ಒದ್ದು ಒಳಗ ಹಾಕ್ತಿನಿ' ಎಂದು ಸಂಪೂರ್ಣ ಜವಾಬ್ದಾರಿ ಧರೆಪ್ಪನಿಗೆ ಹೊರೆಯಿಸಿ ಮಾದೇವನನ್ನು ಬಿಟ್ಟು ಕಳಿಸಿದರು. ಅಂತೂ ತನ್ನ ಮಾತಿನ್ನು ಸ್ಟೇಷನ್ನಿನಲ್ಲಿ ನಡೆಯುತ್ತದೆ